ಕ್ರೆಡಿಟ್ 'ದತ್ತಕುಮಾರ' ಎಂದಾಗಿತ್ತು. ಕೆಲವು ಪುಸ್ತಕಗಳಲ್ಲಿ 'ಬೇಂದ್ರೆ ದತ್ತಾತ್ರೇಯರು' ಎಂದು ದಾಖಲಾದರೆ, ಕೆಲವು ಪುಸ್ತಕಗಳಲ್ಲಿ 'ಬೇಂದ್ರೆ ದತ್ತಾತ್ರೇಯರು' ಎಂದಾಗಿದೆ. 'ಅಂದತ್ತ' ಎಂಬುದು ಬೇಂದ್ರೆಯವರ ಕವನ ಸಂಕಲನಗಳಲ್ಲಿ ಕಾಣಸಿಗುವ ಸಹಜ- ಸಾಮಾನ್ಯ ಉಲ್ಲೇಖ. ಅದು ಅಂಬಿಕಾತನಯದತ್ತ ಹೆಸರಿನ ಸಂಕ್ಷಿಪ್ತ ರೂಪ. ಬೇಂದ್ರೆಯವರ ಪುತ್ರ ವಾಮನ ಬೇಂದ್ರೆ (1935-2016) ಬೇಂದ್ರೆಯವರ ಎಲ್ಲ ಕೃತಿಗಳನ್ನು ಸಂಪಾದಿಸಿ ಪ್ರಸ್ತಾವನೆ ಬರೆದರು. ಆ ಪ್ರಸ್ತಾವನೆಗಳನ್ನೆಲ್ಲ ಸೇರಿಸಿ 'ಸಂವಾದ' ಕಂಡ 'ಅಂದತ್ತ' ಎಂಬ ಪುಸ್ತಕ ಪ್ರಕಟಿಸಿದ್ದಾರೆ. ಬೇಂದ್ರೆಯವರ ಬಗೆಗೆ ಕೆ.ಎಸ್. ಶರ್ಮ ಅವರ ಕೃತಿ 'ಕುವಲಯ ಕಂಡ ಅಂದತ್ತ'.

'ಸದಾನಂದಿ ಜಂಗಮ' ಹೊರತುಪಡಿಸಿ ಉಳಿದ ನಾಮಾಂಕಿತಗಳೆಲ್ಲವು ಅವರ ಹೆಸರುಗಳ ವ್ಯತ್ಯಸ್ತ ರೂಪಗಳು. ಈಗ ಗೊತ್ತಿರುವಂತೆ 'ಹರ್ ಬಂಡರ್' ಅಂಕಿತ ನಾಮದಿಂದ ಬೇಂದ್ರೆಯವರ ಒಂದು ಕವಿತೆ ಪ್ರಕಟವಾಗಿದೆ. 'ಜಯಂತಿ' ಪತ್ರಿಕೆಯ (1938, ಸೆಪ್ಟೆಂಬರ್) 'ಒಂದೇ ಕರ್ನಾಟಕ ಗೀತ' ಪ್ರಕಟವಾಗಿದೆ. 'ನಾಸ್ತಿ' ರಿಕಾರ್ಡು ಕಂಪೆನಿಯವರು ಬ್ರಾಡ್ ಕಾಸ್ಟ್ ಮಾಡಿದ 'ಹರ್ ಬಂಡರ್' ಇವರ ಗೀತ. ಹದಿನೆಂಟು ಲಕ್ಷ ನಾಸ್ತಿ ಪಂಗಡದವರು ಒಕ್ಕೊರಲಿನಲ್ಲಿ ಹೇಳುವ ಹಾಡು' ಎಂಬ ಟಿಪ್ಪಣಿಯು ಕವಿತೆಯ ಜೊತೆಯಲ್ಲಿದೆ. ಕವಿತೆಯ ಜೊತೆಗೆ ಬೇಂದ್ರೆಯವರನ್ನು ಹೋಲುವ, ನಾಜಿ ರೂಪದ ಚಿತ್ರ ಇದೆ. ಹಾಗೆಯೇ ಸ್ವಸ್ತಿಕ್ ಚಿಹ್ನೆಯನ್ನೂ ಸೇರಿಸಲಾಗಿದೆ.

ಈ ಕವಿತೆ ಹುಟ್ಟಿದ ಪ್ರಸಂಗವನ್ನು 'ಜೀವಿ' ಜಿ.ವಿ. ಕುಲಕರ್ಣಿ (ಜ. 1934) ಅವರು 'ನಾ ಕಂಡ ಬೇಂದ್ರೆ: ಜೀವನ ಸಾಹಿತ್ಯ' ಕೃತಿಯಲ್ಲಿ ವಿವರವಾಗಿ ದಾಖಲಿಸಿದ್ದಾರೆ. ಅದು ಹೀಗಿದೆ-

'ಜಯಂತಿ' ಸಾಹಿತ್ಯಕ ಮಾಸಪತ್ರಿಕೆಯನ್ನು ಬೆಟಗೇರಿಯವರು 1938ರಲ್ಲಿ ಪ್ರಾರಂಭಿಸಿದ್ದರು. ಮೊದಲನೆ ವರ್ಷದ ಜುಲೈ ತಿಂಗಳ ಸಂಚಿಕೆಯಲ್ಲಿ ಶಿವರಾಮ ಕಾರಂತರು 'ಕರ್ನಾಟಕದಲ್ಲಿ







ಬೇಂದ್ರೆ ಸಂಪಾದಿಸಿದ 'ಸ್ವಧರ್ಮ'

ಹಿಟ್ಲರ್' ಎಂಬ 'ಅಸಂಬದ್ಧ ಅಪನ್ಯಾಸ' ಎಂದು ಕರೆದು, ಒಂದು ಲೇಖನ ಬರೆದಿದ್ದರು. ಕರ್ನಾಟಕದಲ್ಲಿ 'ಹಿಟ್ಲರ್ ಶಾಹಿ' ಬಂದರೆ ಏನಾಗ ಬಹುದು ಎಂಬ ಕಾಲ್ಪನಿಕ ಚಿತ್ರ ಅದರಲ್ಲಿತ್ತು. 'ನಾಝೀ' ಪಂಥದ ಕನ್ನಡೀಕರಣ ಮಾಡಿ ನಾಸ್ತಿ ಪಂಗಡ ಎಂದು ಕರೆದಿದ್ದರು. ಕರ್ನಾಟಕವನ್ನು ಆರ್ಯರಾಜ್ಯವೆಂದು ಘೋಷಿಸಿದ್ದರು. ಅಲ್ಲಿಯ ಶುದ್ಧ ಕರ್ನಾಟಕ ಸಾಹಿತಿಗಳೆಂದು ಹರ್ ಜಡೀರ್, ಹರ್ ಬಂಡರ್, ಹರ್ ರಾಂಟ್ ಎಂದು ಹೆಸರಿಸಿದ್ದರು. (ಇವು ಜಾಗೀರದಾರ್, ಬೇಂದ್ರೆ, ಕಾರಂತರ ಜರ್ಮನೀಕರಣಗೊಂಡ ಹೆಸರುಗಳು).

'ಕರ್ನಾಟಕವು ಒಮ್ಮತವಾದುದು. ಆ ಮತವೇ ನಮ್ಮ ನಾಸ್ತಿಸಮ್! ಕರ್ನಾಟಕಿಗಳು ಇನ್ನುಮುಂದೆ ಉಡ್ಪಿಯ ಬಿಶಪ್‌ರಿಗೂ, ಶೃಂಗೇರಿಯ

